**ಅಸಲು ದಾವಾ ನಂಃ222/2014**
**ಪಿ.ಡಬ್ಲ್ಯೂಃ 02**

**ದಿನಾಂಕಃ 13-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಕೆ ಎಂ ಎನ್ 9 ನೇ ಪ್ರತಿವಾದಿ ಪರ ವಕೀಲರಿಂದ**

1 ರಿಂದ 7 ನೇ ವಾದಿಯರು ಮತ್ತು ನಾನು ಸಂಬಂಧಿಕರಲ್ಲ. ಸಾಕ್ಷಿಯು ಮುಂದುವರಿದು ಒಂದೇ ಜನಾಂಗದವರು ಎಂದು ಉತ್ತರಿಸುತ್ತಾರೆ. 1 ರಿಂದ 7 ನೇ ವಾದಿಯರು ಚಳ್ಳಕೆರೆಯಲ್ಲಿ ವಾಸವಿದ್ದಾರೆ. ನಾನು ರೆಡ್ಡಿಹಳ್ಳಿಯಲ್ಲಿ ವಾಸವಿದ್ದೇನೆ. ಅಕ್ಕಪಕ್ಕ ನನಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿನ ಚೆಕ್ ಬಂದಿ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತನ್ನು ನಾನು 25 ವರ್ಷಗಳ ಹಿಂದೆ ನೋಡಿರುತ್ತೇನೆ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದ ಕ್ರಯಪತ್ರ ಯಾರ ನಡುವೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

1 ರಿಂದ 7 ನೇ ವಾದಿಯರಿಗೂ ಮತ್ತು 1 ರಿಂದ 8 ನೇ ಪ್ರತಿವಾದಿಯರ ಕುಟುಂಬಕ್ಕೆ ದಾವಾ ಅನುಸೂಚಿ ಸ್ವತ್ತಿನ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ, ಆದರೆ ಹೇಳಿರುವುದನ್ನು ಕೇಳಿರುತ್ತೇನೆ. ಚೆಲುಮಯ್ಯ ಬಿನ್ ಸೋಮಶೇಖರಯ್ಯ ರವರನ್ನು ನಾನು ನೋಡಿರುವುದಿಲ್ಲ. ಸೋಮಶೇಖರಯ್ಯರವರ ಪತ್ನಿಯ ಹೆಸರು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಚೆಲುಮಯ್ಯರವರ ಪತ್ನಿ ಸೋಮಶೇಖರಮ್ಮರವರನ್ನು ನಾನು ನೋಡಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಸದರಿ ಚೆಲುಮಯ್ಯ ಮತ್ತು ಸೋಮಶೇಖರಮ್ಮರವರ ದಂಪತಿಗಳಿಗೆ ಒಟ್ಟು 6 ಜನ ಮಕ್ಕಳು ಎಂದು ಹೇಳಿರುತ್ತೇನೆ. ಅವರುಗಳೆಂದರೆ 1 ನೇ ದ್ವಾರಕಪ್ಪ, 2 ನೇ ವೀರಭದ್ರಪ್ಪ, 3 ನೇ ಜಯಣ್ಣ, 4 ನೇ ಬೋಮಣ್ಣ, 5 ನೇ ನಿಜಗುಣಯ್ಯ ಮತ್ತು 6 ನೇ ದಕ್ಷಿಣಮೂರ್ತಿ ಆಗಿದ್ದು ಸದರಿಯವರುಗಳು ಎಲ್ಲೆಲ್ಲಿ ಯಾವ ಯಾವ ರೀತಿಯಲ್ಲಿ ಯಾವ ಯಾವ ಮನೆಯಲ್ಲಿ ವಾಸವಿದ್ದಾರೆ ಎಂದು ಸೂಚಿಸಿದ ಪ್ರಶ್ನೆ ಸಾಕ್ಷಿಯು ದ್ವಾರಕಪ್ಪ ಮತ್ತು ವೀರಭದ್ರಪ್ಪರವರ ಬಗ್ಗೆ ಗೊತ್ತಿಲ್ಲ. ಉಳಿದವರ ಬಗ್ಗೆ ಗೊತ್ತು. 3 ನೇ ಜಯಣ್ಣ, 4 ನೇ ಬೋಮಣ್ಣ, 5 ನೇ ನಿಜಗುಣಯ್ಯ ಮತ್ತು 6 ನೇ ದಕ್ಷಿಣಮೂರ್ತಿರವರುಗಳು ಪ್ರತ್ಯೇಕವಾಗಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ದಕ್ಷಿಣಮೂರ್ತಿಯವರು ನನಗೆ ಗೊತ್ತಿಲ್ಲ. ಜಯಣ್ಣರವರು ಈಗ ಜೀವಂತ ಇರುವುದಿಲ್ಲ. ಸದರಿ ಜಯಣ್ಣರವರು ಮೃತರಾಗಿ ಅಂದಾಜು 8-10 ವರ್ಷಗಳು ಆಗಿರುತ್ತದೆ. ಸದರಿ ಜಯಣ್ಣರವರಿಗೆ ಹೆಂಡತಿ ಮಕ್ಕಳು ಚಳ್ಳಕೆರೆಯಲ್ಲಿ ವಾಸವಿದ್ದಾರೆ.

ದಾವಾ ಅನುಸೂಚಿ ಸ್ವತ್ತಿನ 3 ಎಕರೆ 2 ಗುಂಟೆ ಜಮೀನಿನ ಕಂದಾಯ ದಾಖಲೆಗಳು ಪ್ರಸ್ತುತವಾಗಿ 9 ನೇ ಪ್ರತಿವಾದಿ ಜಿ ಎಸ್ ಪ್ರಭಾರವರ ಹೆಸರಿನಲ್ಲಿವೆ. ಸದರಿ 9 ನೇ ಪ್ರತಿವಾದಿ ಜಿ ಎಸ್ ಪ್ರಭಾರವರ ಹೆಸರಿಗೆ ದಾವಾ ಅನುಸೂಚಿ ಸ್ವತ್ತು ಯಾವ ಆಧಾರದ ಮೇಲೆ ಬಂದಿದೆ ಎಂದು ನನಗೆ ಗೊತ್ತಿಲ್ಲ. 9 ನೇ ಪ್ರತಿವಾದಿ ಜಿ ಎಸ್ ಪ್ರಭಾರವರು ದಾವಾ ಅನುಸೂಚಿ ಸ್ವತ್ತನ್ನು ಖರೀದಿ ಮಾಡಿದ ದಿನದಿಂದ ಈ ದಿನದವರೆಗೂ ಸದರಿ 9 ನೇ ಪ್ರತಿವಾದಿ ಜಿ ಎಸ್ ಪ್ರಭಾರವರೇ ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತಿನ 3 ಎಕರೆ 2 ಗುಂಟೆ ಜಮೀನು ಬೆದ್ದಲು ಭೂಮಿ ಆಗಿರುತ್ತದೆ.

ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ದಾವಾ ಅನುಸೂಚಿ ಸ್ವತ್ತಿನ 3 ಎಕರೆ 2 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ದಿಃ24-05-2014 ರಂದು 9 ನೇ ಪ್ರತಿವಾದಿ ಪ್ರಭಾರವರ ಹೆಸರಿಗೆ ಆದ ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಲ್ಲ. ಸದರಿ ಕ್ರಯಪತ್ರವಾದಾಗ ನಾನು ಹಾಜರು ಇರಲಿಲ್ಲ. ದಾವಾ ಅನುಸೂಚಿ ಸ್ವತ್ತು 9 ನೇ ಪ್ರತಿವಾದಿ ಜಿ ಎಸ್ ಪ್ರಭಾರವರ ಹೆಸರಿಗೆ ಬಂದ ದಿನದಿಂದ ಇಲ್ಲಿಯವರೆಗೂ ಎಲ್ಲಾ ದಾಖಲೆಗಳು 9 ನೇ ಪ್ರತಿವಾದಿ ಜಿ ಎಸ್ ಪ್ರಭಾರವರ ಹೆಸರಿಗೆ ಇದ್ದು ಸದರಿ 9 ನೇ ಪ್ರತಿವಾದಿ ಜಿ ಎಸ್ ಪ್ರಭಾರವರೇ ವ್ಯವಸಾಯವನ್ನು ಮಾಡಿಸುತ್ತಿದ್ದಾರೆ ಎಂದು ಸೂಚಿಸಿದ ಪ್ರಶ್ನೆ ಸಾಕ್ಷಿಯು ಎಲ್ಲಾ ದಾಖಲೆಗಳಲ್ಲಿ 9 ನೇ ಪ್ರತಿವಾದಿ ಜಿ ಎಸ್ ಪ್ರಭಾರವರ ಹೆಸರು ಇದೆ ಆದರೆ ಸದರಿ 9 ನೇ ಪ್ರತಿವಾದಿ ಜಿ ಎಸ್ ಪ್ರಭಾರವರು ವ್ಯವಸಾಯ ಮಾಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುವಂತೆ 1 ರಿಂದ 7 ನೇ ವಾದಿಯರ ಮತ್ತು 1 ರಿಂದ 8 ನೇ ಪ್ರತಿವಾದಿಯರ ನಡುವೆ ಯಾವುದೇ ಪಂಚಾಯಿತಿ ಆಗಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ 1 ರಿಂದ 7 ನೇ ವಾದಿಯರ ಮತ್ತು 1 ರಿಂದ 8 ನೇ ಪ್ರತಿವಾದಿಯರ ನಡುವೆ ಯಾವುದೇ ಜಗಳ ಆಗಿರುವುದಿಲ್ಲ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿನ ವಿಚಾರವಾಗಿ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಯಾವುದೇ ವೈಯಕ್ತಿಕ ಮಾಹಿತಿ ಇರದೆ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಸರ್ವೇ ನಂ.120/2 ರ ಒಟ್ಟು 9 ಎಕರೆ 2 ಗುಂಟೆ ಜಮೀನಿನ ಪೈಕಿ ದಾವಾ ಅನುಸೂಚಿ ಸ್ವತ್ತು 3 ಎಕರೆ 2 ಗುಂಟೆ ಜಮೀನನ್ನು ಹೊರತುಪಡಿಸಿ ಉಳಿದ 6 ಎಕರೆ ಜಮೀನು ಏನು ಆಗಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಮಾರಾಟ ಮಾಡಿರುತ್ತಾರೆ ವದಂತಿ ಇದೆ ಎಂದು ಉತ್ತರಿಸುತ್ತಾರೆ. ಸದರಿ 6 ಎಕರೆ ಜಮೀನು ಈ ದಿನ ಯಾರ ಹೆಸರಿಗೆ ಇದೆ ಎಂದು ನನಗೆ ಗೊತ್ತಿಲ್ಲ. ಉಳಿದ 6 ಎಕರೆ ಜಮೀನನ್ನು ಯಾರು ವ್ಯವಸಾಯ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಖುದ್ದು ಮಾಹಿತಿ ಇರದೆ

ಇದ್ದರೂ ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.